**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ,**

**ಪೀಠಾಸೀನ ಕೊಳ್ಳೇಗಾಲ**

**ಎಸ್.ಸಿ. 5021/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಮಧುಕುಮಾರ್.ಕೆ.ಕೆ | **ಪ್ರಮಾಣ ವಚನ ಭೋಧಿಸಿದ ದಿನಾಂಕ** |
| **ತಂದೆ ಹೆಸರು** | : | ಲೇಟ್ ಕೆ.ವಿ. ಕೃಷ್ಣಮೂರ್ತಿ | 03.06.2026 |
| **ವಯಸ್ಸು** | : | 50 ವರ್ಷ | |
| **ವೃತ್ತಿ** | : | ಎ.ಎಸ್.ಐ, ಕೊಳ್ಳೇಗಾಲ ಪಟ್ಟಣ ಪೊ.ಠಾಣೆ | **ಪ್ರಾ.ಸಾಃ** 27 |
| **ವಾಸ ಸ್ಥಳ** | : | ಕೊಳ್ಳೇಗಾಲ | **ಚಾ.ಸಾಃ** 35 |

ಆರೋಪಿಯನ್ನು ವಿ.ಸಿ.ಯ ಮೂಲಕ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿತ್ತು, ಅವರಿಗೆ ಧ್ವನಿ ಕೇಳಿಸಲಾಗುತ್ತಿದೆಯಾ ಎಂದು ಪರಿಶೀಲಿಸಿದ ನಂತರ ಅವರ ಹಾಜರಾತಿಯಲ್ಲಿ ಸಾಕ್ಷಿಯ ವಿಚಾರಣೆಯನ್ನು ಮಾಡಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**ನಾನು ಸೆಪ್ಟೆಂಬರ್ 2024 ರಿಂದ ಎ.ಎಸ್.ಐ ಆಗಿ ಕೊಳ್ಳೇಗಾಲ ಪಟ್ಟಣ ಪೊ.ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.**

ದಿಃ 01.01.2025 ರಂದು ರಾತ್ರಿ 8.00 ಗಂಟೆಯಿಂದ ಬೆಳಗ್ಗೆ 8.00 ಗಂಟೆವರಗೆ ಹೊಯ್ಸಳ ವಾಹನದಲ್ಲಿ ಕರ್ತವ್ಯಕ್ಕೆ ನೇಮಿಸಲಾಗಿತ್ತು. ರಾತ್ರಿ 10.00 ಗಂಟೆ ಸಮಯದಲ್ಲಿ ERSS( ದೂರವಾಣಿ ಸಂಖ್ಯೆ 112) ರಿಂದ ನಮಗೆ ಕರೆ ಬಂದು, ಕೊಳ್ಳೇಗಾಲ ಪಟ್ಟಣದ ಈದ್ಗಾ ಮೊಹಲ್ ದಲ್ಲಿ ಆರೋಪಿಯು ತಾನು ಕೊಲೆ ಮಾಡಲು ಪ್ರಯತ್ನಪಟ್ಟಿದ್ದೇನೆ ಎಂದು ಕರೆ ಬಂದಿದೆ, ಸ್ಥಳಕ್ಕೆ ಹೋಗಬೇಕು ಎಂದು

ತಿಳಿಸಿದರು. ಅದರಂತೆ ನಾವು ಸದರಿ ಸ್ಥಳಕ್ಕೆ ಹೋದೆವು. ನನ್ನ ಜೊತೆ ಚಾಸಾ 36 ರವರು ಇದ್ದರು. ಚಾಸಾ 4 ರವರ ಮನೆಯ ಬಳಿ ಹೋದಾಗ ಮನೆ ಮುಂದೆ ಜನರು ನಿಂತಿದ್ದರು. ಅಲ್ಲಿ ನಾವು ವಿಚಾರ ಮಾಡಲಾಗಿ ಆರೋಪಿಯು ಮೃತ ಐಮಾನ್ ಬಾನು ಮತ್ತು ಚಾಸಾ 3 ರವರಿಗೆ ಚಾಕುವಿನಿಂದ ಹಲ್ಲೆ ಮಾಡಿದ್ದಾನೆ ಎಂದು ತಿಳಿದು ಬಂತು. ಆ ಸಮಯಕ್ಕೆ ಪಟ್ಟಣ ಠಾಣೆಯ ಪೋಲೀಸರು ಬಂದು, ಆರೋಪಿಯನ್ನು ಪೊ.ಠಾಣೆಗೆ ಕರೆದುಕೊಂಡು ಹೋಗಿದ್ದರು ಮತ್ತು ಗಾಯಾಳುಗಳನ್ನು ಕೊಳ್ಳೇಗಾಲ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ ಎಂದು ತಿಳಿದು ಬಂತು. ಐಮಾನ್ ಬಾನು ಆಸ್ಪತ್ರೆಯಲ್ಲಿ ಮೃತಪಟ್ಟಳು. ಪಟ್ಟಣ ಠಾಣೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯವರು ಬಂದ ನಂತರ ನಾವು ಸ್ಥಳದಿಂದ ಹೊರಟು ಹೋದೆವು. ಈ ಬಗ್ಗೆ ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

**<u>ಪಾಟೀ ಸವಾಲುಃ- ಶ್ರೀ ಸಿ.ಆರ್ ವಕೀಲರಿಂದ</u>**

ನಮಗೆ **ERSS** ನಿಂದ ಬಂದ ಮಾಹಿತಿಯನ್ನು ನಾನು ಸಂಬಂಧಪಟ್ಟ ದಿನಚರಿಯಲ್ಲಿ ನಮೂದು ಮಾಡಿರುತ್ತೇನೆ. ಮಾಹಿತಿ ಬಂದಾಗ ನಾವು ಯಾವ ಸ್ಥಳದಲ್ಲಿ ಇದ್ದೆವು ಎಂಬುದನ್ನು ದಿನಚರಿಯಲ್ಲಿ ಬರೆದಿರುವುದಿಲ್ಲ. ದಿನಚರಿ ಮಾಹಿತಿಗಳನ್ನು ಮತ್ತು ವಾಹನದ ಲಾಗ್ ಬುಕ್ ಮಾಹಿತಿಯನ್ನು ಮೇಲಾಧಿಕಾರಿಗಳಿಗೆ ಕೊಟ್ಟಿರುವುದಿಲ್ಲ. ದಿಃ 28.01.2025 ರಂದು ತನಿಖಾಧಿಕಾರಿಗಳಾದ ಚಾಸಾ 50 ರವರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. **ERSS** ನಿಂದ ನಮಗೆ ಮಾಹಿತಿ ಬಂದ ನಂತರ ನಾವು ಸ್ಥಳಕ್ಕೆ ಬೇಟಿ ನೀಡಿ ನಂತರ **ERSS** ಕೇಂದ್ರಕ್ಕೆ ಮಾಹಿತಿಯನ್ನು ನೀಡುತ್ತೇವೆ. ಘಟನೆ ಬಗ್ಗೆ ನಮಗೆ ವಿವರ ನೀಡಿದ ಸಾರ್ವಜನಿಕರು ಯಾರು ಈಗ ಹೇಳಲಾಗುವುದಿಲ್ಲ. ಅವರ ಹೆಸರು ವಿಳಾಸಗಳನ್ನು ನಾನು ಪಡೆಯಲಿಲ್ಲ. ನಮಗೆ **ERSS** ಕೇಂದ್ರದಿಂದ ಯಾವುದೇ ಮಾಹಿತಿ ಬಂದಿಲ್ಲ, ಆರೋಪಿಯು ದೂರವಾಣಿ ಸಂಖ್ಯೆ 112 ಗೆ ಯಾವುದೇ ಕರೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಘಟನಾ ಸ್ಥಳಕ್ಕೆ ಹೋದಾಗ ನಾವು ಭಾವಚಿತ್ರಗಳನ್ನು ತೆಗೆಯುತ್ತೇವೆ. ಈ ಪ್ರಕರಣದಲ್ಲೂ ಭಾವಚಿತ್ರಗಳನ್ನು ತೆಗೆದು **ERSS** ಕೇಂದ್ರಕ್ಕೆ ಕಳುಹಿಸಿರುತ್ತೇನೆ. ನಾನು ಸ್ಥಳಕ್ಕೆ ಹೋಗಿಲ್ಲ, ಅಲ್ಲಿ ಘಟನೆ ಬಗ್ಗೆ ಯಾರನ್ನು ವಿಚಾರಣೆ ಮಾಡಿಲ್ಲ ಎಂದರೆ

ಸರಿಯಲ್ಲ. **ERSS** ಕೇಂದ್ರಕ್ಕೆ ನಾನು ಯಾವುದೇ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ